◆ ADVT ◆
ಇಲ್ಲಿ ಜಾಹೀರಾತು
98700 06472 · need24.digital

NEED24 NEWS
हर ख़बर, हर शहर

ನೀಡ್ 24 ನ್ಯೂಸ್

ಪ್ರತಿ ಸುದ್ದಿ, ಪ್ರತಿ ನಗರ

◆ ADVT ◆
ಇಲ್ಲಿ ಜಾಹೀರಾತು
98700 06472 · need24.digital

DIGITAL E-PAPER

PRGI APPLICATION UNDER PROCESS
Application No. T/GJ/2026/0619/2304/1577

GST
GSTIN 24CINPG0564Q1ZT

UDYAM REGISTERED
UDYAM-GJ-14-0003714

◆ DIGITAL NEWS NETWORK ◆
ಭಾರತದ ವಿಶ್ವಾಸಾರ್ಹ ಬಹುಭಾಷಾ ಡಿಜಿಟಲ್ ನ್ಯೂಸ್ ನೆಟ್‌ವರ್ಕ್
11+ Languages | 24×7 Live | e-Paper Daily

ನಮ್ಮ App ಡೌನ್‌ಲೋಡ್ ಮಾಡಿ
Download on the App Store
GET IT ON Google Play

www.need24.digital
info@need24.in
+91 98700 06472
FOLLOW US:

ತೇಜ್ | ಸಟೀಕ | ನಿಷ್ಪಕ್ಷ | ಜನಹಿತ ಮೇ | ಸಚ ಕಿ ಆವಾಜ್ | ಜನ-ಜನ ಕಿ ಆವಾಜ್ | ನಿಡರ ಪತ್ರಕಾರಿತಾ

ಸ್ವಚ್ಛ ಭಾರತ ಯೋಜನೆಯಡಿ ನಿರ್ಮಿಸಿದ ಶೌಚಾಲಯ ಧ್ವಂಸ: ನ್ಯಾಯಕ್ಕಾಗಿ ತಾಲೂಕ ಜನವಾದಿ ಮಹಿಳಾ ಸಂಘಟನೆ ಧರಣಿ



.

ಜಾಲಹಳ್ಳಿ ಬ್ರೇಕಿಂಗ್ ನ್ಯೂಸ್

ಸ್ವಚ್ಛ ಭಾರತ ಯೋಜನೆಯಡಿ ನಿರ್ಮಿಸಿದ ಶೌಚಾಲಯ ಧ್ವಂಸ: ನ್ಯಾಯಕ್ಕಾಗಿ ತಾಲೂಕ ಜನವಾದಿ ಮಹಿಳಾ ಸಂಘಟನೆ ಧರಣಿ

65 ವರ್ಷದ ವೃದ್ಧೆಗೆ ಅನ್ಯಾಯ ಆರೋಪ; ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಂಡು ಶೌಚಾಲಯ ಮರುನಿರ್ಮಿಸುವಂತೆ ಆಗ್ರಹ

ಜಾಲಹಳ್ಳಿ, ನ.12: ದೇವದುರ್ಗ ತಾಲ್ಲೂಕಿನ ಜಾಲಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ 9ನೇ ವಾರ್ಡ್‌ನಲ್ಲಿ ಸ್ವಚ್ಛ ಭಾರತ ಅಭಿಯಾನದಡಿ ನಿರ್ಮಿಸಲಾಗಿದ್ದ ವೈಯಕ್ತಿಕ ಶೌಚಾಲಯವನ್ನು ಧ್ವಂಸಗೊಳಿಸಿರುವುದನ್ನು ಖಂಡಿಸಿ, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ದೇವದುರ್ಗ ತಾಲ್ಲೂಕು ಘಟಕದ ವತಿಯಿಂದ ಗುರುವಾರ ಜಾಲಹಳ್ಳಿ ಗ್ರಾಮ ಪಂಚಾಯಿತಿ ಕಾರ್ಯಾಲಯದ ಮುಂದೆ ಧರಣಿ ಸತ್ಯಾಗ್ರಹ ನಡೆಸಲಾಯಿತು.

ಜಾಲಹಳ್ಳಿ ನಿವಾಸಿ 65 ವರ್ಷದ ಲಕ್ಷ್ಮೀದೇವಿ ಗಂಡ ಅಮರಪ್ಪ ಅವರ ವೈಯಕ್ತಿಕ ಶೌಚಾಲಯವನ್ನು ಧ್ವಂಸಗೊಳಿಸಲಾಗಿದ್ದು, ಇದರಿಂದ ವಯೋವೃದ್ಧ ಮಹಿಳೆಗೆ ತೀವ್ರ ತೊಂದರೆಯಾಗಿದೆ. ಈ ಕುರಿತು ಮಹಿಳೆ ಅಕ್ಟೋಬರ್ 31ರಂದು ರಾಯಚೂರು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿ ನ್ಯಾಯ ಒದಗಿಸುವಂತೆ ಆಗ್ರಹಿಸಿದ್ದರು.

ಮನವಿಯಲ್ಲಿ ತಿಳಿಸಿರುವಂತೆ, ಕೇಂದ್ರ ಸರ್ಕಾರದ ಸ್ವಚ್ಛ ಭಾರತ ಅಭಿಯಾನದಡಿ ಲಕ್ಷ್ಮೀದೇವಿ ಅವರಿಗೆ ವೈಯಕ್ತಿಕ ಶೌಚಾಲಯ ಮಂಜೂರಾಗಿತ್ತು. MBR ID ಸಂಖ್ಯೆ 1384 05246448 ಹಾಗೂ ವಾರ್ಡ್ ನಂ. 9ರ ಅಡಿಯಲ್ಲಿ ಮನೆಯ ಮುಂದಿನ ಜಾಗದಲ್ಲಿ ಶೌಚಾಲಯ ನಿರ್ಮಿಸಿಕೊಳ್ಳಲಾಗಿತ್ತು.

ಆದರೆ, ವೈಯಕ್ತಿಕ ದ್ವೇಷದ ಹಿನ್ನೆಲೆಯಲ್ಲಿ ಶೌಚಾಲಯವನ್ನು ಧ್ವಂಸಗೊಳಿಸಲಾಗಿದೆ ಎಂದು ಲಕ್ಷ್ಮೀದೇವಿ ಆರೋಪಿಸಿದ್ದಾರೆ. ಇದರಿಂದ ಬಹಿರ್ದೆಸೆಗೆ ಹೋಗಲು ತೀವ್ರ ತೊಂದರೆಯಾಗುತ್ತಿದ್ದು, ವಯೋವೃದ್ಧ ಮಹಿಳೆಯ ಸಮಸ್ಯೆಯನ್ನು ಅಧಿಕಾರಿಗಳು ಗಂಭೀರವಾಗಿ ಪರಿಗಣಿಸಬೇಕು ಎಂದು ಮಹಿಳಾ ಸಂಘಟನೆ ಒತ್ತಾಯಿಸಿದೆ.

ಸಂಬಂಧಪಟ್ಟ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ, ಶೌಚಾಲಯ ಧ್ವಂಸಗೊಳಿಸಿದ ಪ್ರಕರಣದ ಕುರಿತು ಸೂಕ್ತ ತನಿಖೆ ಕೈಗೊಂಡು ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು. ಅಲ್ಲದೆ, ಸಂತ್ರಸ್ತ ಮಹಿಳೆಗೆ ತಕ್ಷಣ ಶೌಚಾಲಯ ಮರುನಿರ್ಮಿಸಿಕೊಡಬೇಕು ಎಂದು ಧರಣಿ ಮೂಲಕ ಆಗ್ರಹಿಸಲಾಯಿತು.

ಈ ಹಿಂದೆ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿರುವ ಮನವಿಯ ಬಗ್ಗೆ ಕ್ರಮ ಕೈಗೊಂಡು ಮಹಿಳೆಗೆ ನ್ಯಾಯ ಒದಗಿಸಬೇಕು. ಬಡ ಹಾಗೂ ವಯೋವೃದ್ಧ ಮಹಿಳೆಯ ಮೂಲಭೂತ ಸೌಕರ್ಯದ ಸಮಸ್ಯೆಯನ್ನು ಕೂಡಲೇ ಬಗೆಹರಿಸಬೇಕು ಎಂದು ಸಂಘಟನೆಯ ಮುಖಂಡರು ಒತ್ತಾಯಿಸಿದರು.ಈ ಸಂದರ್ಭದಲ್ಲಿ

ಶಕುಂತಲಾ ದೇಸಾಯಿ ಅಧ್ಯಕ್ಷರು ತಾಲೂಕ ಜನವಾದಿ ಮಹಿಳಾ ಸಂಘಟನೆ ಜಾಹಿರಾ ಕಾರ್ಯದರ್ಶಿ ಗಳು ತಾಲೂಕ ಜನವಾದಿ ಮಹಿಳಾ ಸಂಘಟನೆ

ಲಕ್ಷ್ಮಿ ಅಮರಪ್ಪ,

ಅಕ್ಕ ಮಹಾದೇವಿ ಸೌದ್ರಿ, ಅಮರಮ್ಮ ಸೌದ್ರಿ, ರಾಜೇಶ್ವರಿ ಸೌದ್ರಿ, ಅಯ್ಯಮ್ಮ, ಶೇಖಮ್ಮ ದೇವಕಮ್ಮ, ಚನ್ನಮ್ಮ, ಲಕ್ಷ್ಮಿ ಊರಿನ ಮುಖಂಡರಾದ ಶ್ರೀ ದರ್ ದೇಸಾಯಿ, ಜಿಲ್ಲಾ ಸಿಪಿಎಂ ಮುಖಂಡರಾದ ನರಸಣ್ಣ ನಾಯಕ, ರಾಜ್ಯ ಕಟ್ಟಡ ಕಾರ್ಮಿಕ ಮುಖಂಡರಾದ ಶಬ್ಬೀರ್ ಜಾಲಹಳ್ಳಿ, Dyfi ಮುಖಂಡರಾದ ರಿಯಾಜ್ ಆರ್ತಿ, ಮೌನೇಶ್ ಜಾಲಹಳ್ಳಿ, ಗ್ರಾಮ ಪಂಚಾಯತ್ ಸದಸ್ಯರಾದ ಅಯ್ಯಪ್ಪ ತಾತ, ಶಿವಮಾನ್ಯ ತ್ಯಾಪ್ಲಿ,ಹಾಗೂ ಇನ್ನಿತರರು ಹಾಜರಿದ್ದರು

ಜಾಲಹಳ್ಳಿ ಯ ಗ್ರಾಮ ಪಂಚಾಯತ್ ಕಾರ್ಯಾಲಯದ ಮುಂದೆ ಧರಣಿ ಸಂಜೆವರೆಗೆ ಮುಂದು ವರೆದಿತ್ತು

ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ.

— Khaja Hussain

ಬೆಲೆ ಏರಿಕೆ ವಾಪಸ್‌ಗೆ ಆಗ್ರಹಿಸಿ ಪ್ರತಿಭಟನೆ - ಹಾಲು, ಮೊಸರು, ತುಪ್ಪ, ಬಸ್ ಪ್ರಯಾಣ ದರ ಏರಿಕೆ ಹಿಂಪಡೆಯಲು ಸಿಪಿಐಎಂ ಆಗ್ರಹ - ರಾಯಚೂರಿನ ಟಿಪ್ಪು ಸುಲ್ತಾನ್ ಗಾರ್ಡನ್‌ನಲ್ಲಿ ಪ್ರತಿಭಟನೆ



ರಾಯಚೂರು: ಹಾಲು, ಮೊಸರು, ತುಪ್ಪ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಹಾಗೂ ಬಸ್ ಪ್ರಯಾಣ ದರ ಏರಿಕೆಯನ್ನು ತಕ್ಷಣ ಹಿಂಪಡೆಯುವಂತೆ ಒತ್ತಾಯಿಸಿ ಸಿಪಿಐಎಂ ರಾಯಚೂರು ಜಿಲ್ಲಾ ಸಮಿತಿ ನೇತೃತ್ವದಲ್ಲಿ ನಗರದ ಟಿಪ್ಪು ಸುಲ್ತಾನ್ ಗಾರ್ಡನ್‌ನಲ್ಲಿ ಪ್ರತಿಭಟನೆ ನಡೆಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಪಕ್ಷದ ಮುಖಂಡರು, ರಾಜ್ಯ ಸರ್ಕಾರ ಹಾಲು ಮತ್ತು ಮೊಸರಿನ ದರವನ್ನು ಪ್ರತಿ ಲೀಟರ್‌ಗೆ 8 ರೂ ಹಾಗೂ ತುಪ್ಪದ ದರವನ್ನು ಪ್ರತಿ ಕೆ.ಜಿ.ಗೆ 104 ರೂ ಹೆಚ್ಚಿಸಿರುವುದು ಜನಸಾಮಾನ್ಯರ ಜೀವನದ ಮೇಲೆ ಹೆಚ್ಚುವರಿ ಆರ್ಥಿಕ ಹೊರೆ ಉಂಟುಮಾಡಿದೆ ಎಂದು ಆಕ್ರೋಶಿಸಿದರು. ಈಗಾಗಲೇ ಬಡವರು, ನಿರುದ್ಯೋಗಿ ಹಾಗೂ ಬೆಲೆ ಏರಿಕೆಯಿಂದ ಬಡವರು, ದಲಿತರು ಮತ್ತು ಕೂಲಿ ಕಾರ್ಮಿಕರು ಸಂಕಷ್ಟದಲ್ಲಿದ್ದಾರೆ. ಇಂತಹ ಸಂದರ್ಭದಲ್ಲಿ ಅಗತ್ಯ ವಸ್ತುಗಳ ಬೆಲೆ ಹೆಚ್ಚಿಸಿರುವುದು ಜನವಿರೋಧಿ ಧೋರಣೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಹಾಲು ಉತ್ಪಾದಕರಿಗೆ ಪ್ರತಿ ಲೀಟರ್‌ಗೆ 8 ರೂ ಪೂರೈಸುವುದಾಗಿ ನೀಡಿದರೆ, ತುಪ್ಪ ಆಹಾರದ ವೆಚ್ಚ ಕಡಿಮೆ ಮಾಡಲು ಹಾಲು ಒಕ್ಕೂಟಗಳು ಮತ್ತು ಡೈರಿಗಳಲ್ಲಿ ಭ್ರಷ್ಟಾಚಾರ ಹಾಗೂ ಸೋರಿಕೆಗೆ ಕಡಿವಾಣ ಹಾಕಬೇಕು ಎಂದು ಒತ್ತಾಯಿಸಿದರು.

ಅಲ್ಲದೆ, ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ನಿಯಂತ್ರಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕು. ಕಾಳಸಂತೆಕೋರರ ವಿರುದ್ಧ ಕಠಿಣ ಕ್ರಮ ಜರುಗಿಸಿ, ಬಡ ಪರಿಹಾರ ಕಾಮಗಾರಿಗಳನ್ನು ತಕ್ಷಣ ಜಾರಿಗೊಳಿಸಬೇಕು. ಹಾಲು, ಮೊಸರು ಮತ್ತು ಬಸ್ ಪ್ರಯಾಣ ದರ ಏರಿಕೆಯನ್ನು ಕೂಡಲೇ ಹಿಂಪಡೆಯಬೇಕು ಎಂದು ಆಗ್ರಹಿಸಿದರು.

ಜಿಲ್ಲಾ ಕಾರ್ಯದರ್ಶಿ ಕೆ.ಜೆ. ವಿರೇಶ್, ತಾಲೂಕು ಕಾರ್ಯದರ್ಶಿ ಹೆಚ್. ಪದ್ಮಾ, ಡಿ.ಎಸ್. ಶರಣಬಸವ, ಕೆ. ಮಲ್ಲೇಶಪ್ಪ, ಬಸವಂತರಾಯ ಗೌಡ, ನರಸಪ್ಪ ನಾಯಕ, ಹನುಮಂತ ಮಡಗಲೂರು, ಗೌಡಪ್ಪ ನಾಯಕ, ನಿರ್ಮಲ, ಸುಮಂತ, ನರಸಿಂಹಲು, ಮಾರೇಪ್ಪ, ಮಹಾದೇವಿ ಸೇರಿದಂತೆ ಹಲವರು ಭಾಗವಹಿಸಿದ್ದರು.

— Ningappa

Video: ನ.14ರಂದು ನೀರಿಗಾಗಿ ನಡೆಯಲಿರುವ ಹೋರಾಟದ ಜಾಗೃತಿ ಮೂಡಿಸುತ್ತಿರುವುದು



ದೇವದುರ್ಗ: ತಾಲ್ಲೂಕಿನ ಸಿರವಾರ ಕ್ರಾಸ್ ಬಳಿ ನ.14ರಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ನೇತೃತ್ವದಲ್ಲಿ ನಡೆಯಲಿರುವ ಹೋರಾಟದ ಜಾಗೃತಿ ಮಾಡಲಾಯಿತು.

ಹಳ್ಳಿಹಳ್ಳಿಗಳಲ್ಲಿ ಆಟೋ ಮುಖಾಂತರ ಮೈಕ್ ಹಿಡಿದು ಹೆಚ್ಚಿನ ರೈತರು ಭಾಗವಹಿಸುವಂತೆ ಮನವಿ ಮಾಡುತ್ತಿರುವುದು.

— Ningappa

"ವಲಸೆ ಯಾಕೇ ! ನಿಮ್ಮೂರಲ್ಲಿಯೇ ಕೂಲಿ ಕೆಲಸ" - ಯಾದಗಿರಿ ರೈಲ್ವೆ ನಿಲ್ದಾಣದಲ್ಲಿ ವಲಸೆ ತಡೆ ವಿಶೇಷ ಜಾಗೃತಿ ಅಭಿಯಾನಕ್ಕೆ ಚಾಲನೆ - VB-G RAM-G ಯೋಜನೆಯಲ್ಲಿ 125 ದಿನ ಕೆಲಸ, ದಿನಕ್ಕೆ 382 ರೂ ಕೂಲಿ



"ವಲಸೆ ಯಾಕೇ ! ನಿಮ್ಮೂರಲ್ಲಿಯೇ ಕೂಲಿ ಕೆಲಸ" - ಯಾದಗಿರಿಯಲ್ಲಿ ವಲಸೆ ತಡೆ ಜಾಗೃತಿ ಅಭಿಯಾನಕ್ಕೆ ಚಾಲನೆ

ಯಾದಗಿರಿ: ರೈಲ್ವೆ ನಿಲ್ದಾಣದಲ್ಲಿ ಇಂದು ಜಿಲ್ಲಾ ಪಂಚಾಯತ್ ಮತ್ತು ತಾಲೂಕು ಪಂಚಾಯತ್ ಸಂಯುಕ್ತಾಶ್ರಯದಿಂದ ಜಿಲ್ಲೆಯ ಗ್ರಾಮೀಣ ಪ್ರದೇಶದ ಕಾರ್ಮಿಕರು ವಲಸೆ ಹೋಗದಂತೆ ತಡೆಯಲು "ವಲಸೆ ಯಾಕೇ ! ನಿಮ್ಮೂರಲ್ಲಿಯೇ ಕೂಲಿ ಕೆಲಸ" ದ ಕುರಿತು ವಿಶೇಷ ಜಾಗೃತಿ ಅಭಿಯಾನವನ್ನು ಶ್ರೀ ಬಸವರಾಜ ಶರಭೈ ಮಾನ್ಯ ಯೋಜನಾ ನಿರ್ದೇಶಕರು (ಪ್ರ) ಜಿಲ್ಲಾ ಪಂಚಾಯತ್ ಯಾದಗಿರಿ ರವರು ಚಾಲನೆ ನೀಡಿದರು. ಕೂಲಿ ಕಾರ್ಮಿಕರಿಗೆ VB-G RAM-G ಯೋಜನೆಯಡಿ ವರ್ಷದಲ್ಲಿ ಕುಟುಂಬ ಒಂದಕ್ಕೆ 125 ದಿನದ ಕೆಲಸ ಹಾಗೂ ಒಂದು ದಿನಕ್ಕೆ 382 ರೂ ಕೂಲಿ ನೀಡುವ ಕುರಿತು ಮಾಹಿತಿ ನೀಡಿ ಕೂಲಿಗಾಗಿ ವಲಸೆ ಹೋಗದಂತೆ ಜನರಿಗೆ ಮನವೊಲಿಸಿದರು.

ಈ ವೇಳೆ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀ ಬಸವರಾಜ ಸಜ್ಜನ್, ಶ್ರೀ ಶಶಿಧರ ಹಿರೇಮಠ, ಶ್ರೀ ಅಮರೇಶ ಪಾಟೀಲ್ ಉಪಸ್ಥಿತರಿದ್ದರು.

ಯಾದಗಿರಿ ತಾಪಂ ವ್ಯವಸ್ಥಾಪಕರು, VB-G RAM-G, NRLM ಯೋಜನೆಯ ಮತ್ತು ಕಚೇರಿ ಸಿಬ್ಬಂದಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಜಾಗೃತಿ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

— Ningappa

ಸದಸ್ಯರಾಗಿ ನೇಮಕ - ಸಚಿವ ಬಸವರಾಜ ರಾಯರೆಡ್ಡಿಯವರಿಗೆ ಡಾ.ರಜಾಕ್ ಉಸ್ತಾದ್ ಅವರಿಂದ ಧನ್ಯವಾದ



ಉನ್ನತ ಶಿಕ್ಷಣ ಪರಿಷತ್ತಿನ ಸದಸ್ಯರಾಗಿ ನೇಮಕ - ಸಚಿವರಿಗೆ ಧನ್ಯವಾದ ಸಲ್ಲಿಸಿದ ಡಾ.ರಜಾಕ್ ಉಸ್ತಾದ್

ರಾಯಚೂರು: ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಸಚಿವರು, ಉನ್ನತ ಶಿಕ್ಷಣ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಬಸವರಾಜ ರಾಯರೆಡ್ಡಿಯವರನ್ನು ಡಾ.ರಜಾಕ್ ಉಸ್ತಾದ್ ಅವರು ಪರಿಷತ್ತಿನ ಕಛೇರಿಯಲ್ಲಿ ಭೇಟಿಯಾಗಿ ಪರಿಷತ್ತಿನ ಸದಸ್ಯರನ್ನಾಗಿ ನೇಮಿಸಿದ್ದಕ್ಕೆ ಧನ್ಯವಾದ ಸಲ್ಲಿಸಿದರು.

ಈ ಸಂದರ್ಭದಲ್ಲಿ ಅವರ ಹಿತೈಷಿಗಳಾದ ಮಾಜಿ ಸಚಿವರಾದ ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪುರ ಅವರು ಉಪಸ್ಥಿತರಿದ್ದರು.

— Ningappa

ಜಾಲಹಳ್ಳಿ ಗ್ರಾ.ಪಂ. ಸಿಬ್ಬಂದಿಯ 12 ತಿಂಗಳ ಬಾಕಿ ವೇತನ ಪಾವತಿಗೆ 20 ದಿನಗಳ ಭರವಸೆ



ಜಾಲಹಳ್ಳಿ ಬ್ರೇಕಿಂಗ್ ನ್ಯೂಸ್

ಜಾಲಹಳ್ಳಿ ಗ್ರಾ.ಪಂ. ಸಿಬ್ಬಂದಿಯ 12 ತಿಂಗಳ ಬಾಕಿ ವೇತನ ಪಾವತಿಗೆ 20 ದಿನಗಳ ಭರವಸೆ

ನೌಕರರ ಸಂಘದ ಧರಣಿ ಸತ್ಯಾಗ್ರಹಕ್ಕೆ ಗ್ರಾಮಸ್ಥರು, ಗ್ರಾ.ಪಂ. ಸದಸ್ಯರ ಬೆಂಬಲ; ಪಿಡಿಒ ಅವರಿಂದ ಲಿಖಿತ ಭರವಸೆ

ಜಾಲಹಳ್ಳಿ, ನ.12: ಜಾಲಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ 29 ಸಿಬ್ಬಂದಿಗೆ ಕಳೆದ 12 ತಿಂಗಳಿನಿಂದ ಬಾಕಿ ಉಳಿದಿರುವ ವೇತನ ಪಾವತಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಗ್ರಾಮ ಪಂಚಾಯತ್ ನೌಕರರ ಸಂಘ (CITU) ವತಿಯಿಂದ ಗುರುವಾರ ಧರಣಿ ಸತ್ಯಾಗ್ರಹ ನಡೆಸಲಾಯಿತು.

ಧರಣಿಗೆ ಜಾಲಹಳ್ಳಿ ಗ್ರಾಮ ಪಂಚಾಯಿತಿಯ ಎಲ್ಲಾ ಸಿಬ್ಬಂದಿ ಬೆಂಬಲ ಸೂಚಿಸಿದ್ದು, ಗ್ರಾಮದ ಮುಖಂಡರು ಹಾಗೂ ಗ್ರಾಮ ಪಂಚಾಯಿತಿ ಸದಸ್ಯರು ಕೂಡ ಹೋರಾಟಕ್ಕೆ ಕೈಜೋಡಿಸಿದರು. ನೌಕರರ ಸಂಘದ ಹೋರಾಟಕ್ಕೆ ಸ್ಪಂದಿಸಿದ ಗ್ರಾಮ ಪಂಚಾಯಿತಿ ಆಡಳಿತ, ಸಿಬ್ಬಂದಿಗಳ ಸಮಸ್ಯೆ ಪರಿಹರಿಸುವ ಭರವಸೆ ನೀಡಿದೆ.

ಸಿಬ್ಬಂದಿಗಳ ಬಾಕಿ ವೇತನ ಹಾಗೂ ಅನುದಾನ ಬಿಡುಗಡೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಮುಂದಿನ 20 ದಿನಗಳೊಳಗೆ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದು ಪರಿಹರಿಸಲು ಕ್ರಮ ಕೈಗೊಳ್ಳುವುದಾಗಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಲಿಖಿತ ಭರವಸೆ ನೀಡಿದ್ದಾರೆ.

ನವೆಂಬರ್ 12ರಂದು ಜಾಲಹಳ್ಳಿ ಗ್ರಾಮ ಪಂಚಾಯಿತಿ ಕಾರ್ಯಾಲಯದಿಂದ ನೌಕರರ ಸಂಘಕ್ಕೆ ನೀಡಿದ ಅಧಿಕೃತ ಪತ್ರದಲ್ಲಿ 29 ಸಿಬ್ಬಂದಿಯ 12 ತಿಂಗಳ ಬಾಕಿ ವೇತನ ಹಾಗೂ ಅನುದಾನಕ್ಕೆ ಸಂಬಂಧಿಸಿದ ಸಮಸ್ಯೆಗಳ ಕುರಿತು ಉಲ್ಲೇಖಿಸಲಾಗಿದೆ.

ಸಿಬ್ಬಂದಿಗಳಿಗೆ ಬಾಕಿ ವೇತನ ಪಾವತಿಸುವುದು, ಪ್ರತಿ ನಾಲ್ಕು ತಿಂಗಳಿಗೊಮ್ಮೆ ವೇತನ ಅನುದಾನ ಬಿಡುಗಡೆ, ತುಟ್ಟಿಭತ್ಯೆ ನೀಡುವುದು, ಸ್ವಚ್ಛತಾ ಸಿಬ್ಬಂದಿಗೆ ಸುರಕ್ಷತಾ ಪರಿಕರಗಳನ್ನು ಒದಗಿಸುವುದು ಹಾಗೂ ನೀರು ಪಂಪ್ ಸಿಬ್ಬಂದಿಗೆ ಅಗತ್ಯ ಭತ್ಯೆ ಮತ್ತು ಸಲಕರಣೆಗಳನ್ನು ನೀಡುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಸಂಘ ಮುಂದಿಟ್ಟಿದೆ. ನವೆಂಬರ್ 12ರಿಂದ ಕೆಲಸ ಸ್ಥಗಿತಗೊಳಿಸಿ ನಿರಂತರ ಧರಣಿ ನಡೆಸುವುದಾಗಿ ಸಿಬ್ಬಂದಿ ಎಚ್ಚರಿಕೆ ನೀಡಿದ್ದರು. ಇದೀಗ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ 20 ದಿನಗಳೊಳಗೆ ಸಮಸ್ಯೆ ಪರಿಹರಿಸುವುದಾಗಿ ಲಿಖಿತ ಭರವಸೆ ನೀಡಿರುವುದರಿಂದ ಸಿಬ್ಬಂದಿಯಲ್ಲಿ ನಿರೀಕ್ಷೆ ಮೂಡಿದೆ.

ಈ ಸಂದರ್ಭದಲ್ಲಿ ಗ್ರಾಮ ಸಮಿತಿ ಅಧ್ಯಕ್ಷ ವೆಂಕೋಬ, ಕಾರ್ಯದರ್ಶಿ ಕಾಶಿಲಿಂಗ, ಜಿಲ್ಲಾ CITU ಮುಖಂಡರಾದ ಗಿರಿಯಪ್ಪ ಪೂಜಾರಿ, ರಾಯಪ್ಪ, ಮುದರಂಗಪ್ಪ, ಸೋಹೇಲ್ ಸೇರಿದಂತೆ ಮಹಿಳಾ ಸಿಬ್ಬಂದಿ ಉಪಸ್ಥಿತರಿದ್ದರು.

ಧರಣಿ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಜಾಲಹಳ್ಳಿ ಪೊಲೀಸ್ ಠಾಣೆಯ ಪಿಎಸ್‌ಐ ವೈಶಾಲಿ ಜಳಕಿ ಅವರ ನೇತೃತ್ವದಲ್ಲಿ ಸೂಕ್ತ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು.

ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ

— Khaja Hussain

ನವ್ಹಂಬರ್ 23 ರಂದು ಶಿಕ್ಷಕರಿಗಾಗಿ ತಾಲೂಕು ಮಟ್ಟದ ಸಹಪಠ್ಯ ಚಟುವಟಿಕೆ



2026-27 ನೇ ಸಾಲಿನ ತಾಲೂಕು ಮಟ್ಟದ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರಿಗೆ ಸಹಪಠ್ಯ ಚಟುವಟಿಕೆ ಕಾರ್ಯಕ್ರಮ ಸ್ಪರ್ಧೆಗಳು ದಿನಾಂಕ 23-11-2026 ರಂದು ಬೆಳಿಗ್ಗೆ 10:00 ಗಂಟೆಗೆ ಟಿ ಎಲ್ ಸಿ ಕೇಂದ್ರ ಬಸವನಬಾಗೇವಾಡಿ ಯಲ್ಲಿ ಆಯೋಜನೆ ಮಾಡಲಾಗಿದೆ. ಇದರಲ್ಲಿ ತಾಲೂಕಿನ ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಪ್ರಾಥಮಿಕ/ಪ್ರೌಢಶಾಲಾ ಶಿಕ್ಷಕರು ಮತ್ತು ಅನುಷ್ಠಾನಾಧಿಕಾರಿಗಳು ಸ್ಪರ್ಧಿಸಬಹುದು.

ಜಾನಪದ ಗೀತೆ ಸ್ಪರ್ಧೆ, ಆಶುಭಾಷಣ ಸ್ಪರ್ಧೆ, ಪ್ರಬಂಧ ಸ್ಪರ್ಧೆ, ವಿಜ್ಞಾನ ರಸಪ್ರಶ್ನೆ ಸ್ಪರ್ಧೆ, ಸ್ಥಳದಲ್ಲಿ ಚಿತ್ರ ಬರೆಯುವ ಸ್ಪರ್ಧೆ, ಸಾಮಾನ್ಯ ರಸಪ್ರಶ್ನೆ ಸ್ಪರ್ಧೆ, ಸ್ಥಳದಲ್ಲಿ ಪಾಠೋಪಕರಣಗಳ (TLM) ತಯಾರಿಕಾ ಸ್ಪರ್ಧೆಗಳು ನಡೆಯಲಿವೆ.

ಒಬ್ಬ ಶಿಕ್ಷಕರು ಯಾವುದಾದರೂ ಒಂದು ಸ್ಪರ್ಧೆಯಲ್ಲಿ ಮಾತ್ರ ಭಾಗವಹಿಸಲು ಅವಕಾಶವಿರುತ್ತದೆ.

ಸ್ಪರ್ಧೆಯಲ್ಲಿ ವಿಜೇತರಾದ ಶಿಕ್ಷಕರಿಗೆ ಪ್ರಶಸ್ತಿ ಪತ್ರ ಹಾಗೂ ನಗದು ಬಹುಮಾನ ನೀಡಲಾಗುವುದು.

ಸ್ಪರ್ಧೆಯಲ್ಲಿ ಭಾಗವಹಿಸಲು ಇಚ್ಛಿಸುವ ಶಿಕ್ಷಕರು ದಿನಾಂಕ 18-11-2026 ರ ಒಳಗಾಗಿ ಸಹಪಠ್ಯ ಚಟುವಟಿಕೆಯ ನೋಡಲ್ ಅಧಿಕಾರಿಗಳಾದ ಶ್ರೀ ಎಸ್. ಎಸ್. ಅಂಬಲಿ, ಶಿಕ್ಷಣ ಸಂಯೋಜಕರು (ಮೊಬೈಲ್: 9901446256) ಇವರನ್ನು ಸಂಪರ್ಕಿಸಿ ತಮ್ಮ ಹೆಸರನ್ನು ಕಡ್ಡಾಯವಾಗಿ ನೋಂದಾಯಿಸಿಕೊಳ್ಳತಕ್ಕದ್ದು ಎಂದು ಬಸವನಬಾಗೇವಾಡಿಯ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀಮತಿ ರೇಣುಕಾ ಕಲಬುರ್ಗಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಕ್ಷೇತ್ರ ಸಮನ್ವಯಾಧಿಕಾರಿಗಳಾದ ಶ್ರೀ ಸುನಿಲ್ ನಾಯಕ, ಶಿಕ್ಷಣ ಸಂಯೋಜಕರಾದ ಶ್ರೀ ಎಸ್ ಆರ್ ಮಣೂರ, ಶ್ರೀ ಎಸ್ ಎಸ್ ಅಂಬಲಿ, ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಎಮ್ ವಿ ಗಬ್ಬೂರ, ಶ್ರೀ ಆರ್ ಜಿ ಪವಾರ ಉಪಸ್ಥಿತರಿದ್ದರು.

— Mallikarjun Gabbur

ನಿಲಯದಲ್ಲಿ ವಿದ್ಯಾರ್ಥಿನಿಯರಿಗೆ ಜಾಗೃತಿ - ಪೋಕ್ಸೋ ಕಾಯ್ದೆ, ಬಾಲ್ಯವಿವಾಹ ತಡೆ ಕಾಯಿದೆ, 1098 ಮತ್ತು 112 ಸಹಾಯವಾಣಿ ಬಗ್ಗೆ ಮಾಹಿತಿ



ರಾಯಚೂರು: ತುರ್ವಿಹಾಳ ಪೊಲೀಸ್ ಠಾಣೆ ವ್ಯಾಪ್ತಿಯ ಬಾಲಕಿಯರ ವಸತಿ ನಿಲಯ ತುರ್ವಿಹಾಳದಲ್ಲಿ ವಿದ್ಯಾರ್ಥಿಗಳಿಗೆ ಪಿಎಸ್‌ಐ ಪೋಕ್ಸೋ ಕಾಯ್ದೆ, ಬಾಲ್ಯವಿವಾಹ ತಡೆ ಕಾಯಿದೆ ಹಾಗೂ ಮಹಿಳಾ ಮತ್ತು ಮಕ್ಕಳ ಸಹಾಯವಾಣಿ 1098 ಮತ್ತು ಯಾವುದೇ ತುರ್ತು ಸಂದರ್ಭದಲ್ಲಿ ಸಹಾಯವಾಣಿ 112 ಬಗ್ಗೆ ಜಾಗೃತಿ ಮೂಡಿಸಿದರು.

ವಿದ್ಯಾರ್ಥಿನಿಯರು ತಮಗಾಗುವ ಯಾವುದೇ ತೊಂದರೆ, ದೌರ್ಜನ್ಯಗಳ ಬಗ್ಗೆ ಹೆದರದೆ ಪೊಲೀಸರಿಗೆ ಹಾಗೂ ಸಹಾಯವಾಣಿಗಳಿಗೆ ಮಾಹಿತಿ ನೀಡಬೇಕು ಎಂದು ಅವರು ತಿಳಿಸಿದರು. ಬಾಲ್ಯವಿವಾಹ ಕಾನೂನುಬಾಹಿರವಾಗಿದ್ದು, ಅದರ ವಿರುದ್ಧ ಜಾಗೃತರಾಗಿರಬೇಕು ಎಂದು ಮನವರಿಕೆ ಮಾಡಿದರು.

— Ningappa

ಸಮಯಕ್ಕೆ ಸರಿಯಾಗಿ ಓಡದ ಬಸ್‌ಗಳು ಡಿಪೋ ಮುಂದೆಯೇ ವಿದ್ಯಾರ್ಥಿಗಳು ಸಾರ್ವಜನಿಕರ ದಿಢೀರ್ ಪ್ರತಿಭಟನೆ



ಲಿಂಗಸೂಗೂರು: ಹಟ್ಟಿ ಪಟ್ಟಣದಲ್ಲಿ ಶಾಲಾ ವಿದ್ಯಾರ್ಥಿಗಳಿಗೆ ಶಾಲಾ ಕಾಲೇಜು ಸಮಯಕ್ಕೆ ಸರಿಯಾಗಿ ಬಸ್ ಬರ್ತಿಲ್ಲ ಎಂದು ಬಸ್ ಡಿಪೋ ಮುಂದೆ ಪಾಲಕರು ಮತ್ತು ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿ ಸಮಯಕ್ಕೆ ಸರಿಯಾಗಿ ಬಸ್ ಓಡಿಸುವಂತೆ ಘೋಷಣೆ ಹಾಕಲಾಯಿತು.

ವಿವಿಧ ಹಳ್ಳಿಗಳಿಂದ ಪಟ್ಟಣಕ್ಕೆ ಬರುವ ವಿವಿಧ ಶಾಲಾ ಕಾಲೇಜು ವಿದ್ಯಾರ್ಥಿಗಳು, ಸಾರ್ವಜನಿಕರು, ವಿವಿಧ ಸಂಘಟನೆ ಮುಖಂಡರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಡಿಪೋ ವ್ಯವಸ್ಥಾಪಕರು ಸ್ಥಳಕ್ಕೆ ಬಂದು ಪ್ರತಿಭಟನಾ ನಿರತ ವಿದ್ಯಾರ್ಥಿಗಳ ಬೇಡಿಕೆಗಳನ್ನು ಆಲಿಸಿದ ಅವರು ಮುಂದಿನ ದಿನಗಳಲ್ಲಿ ಯಾವುದೇ ಸಮಸ್ಯೆ ಆಗದಂತೆ ನೋಡಿಕೊಳ್ಳುವ ಭರವಸೆ ನೀಡಿದರು ಎನ್ನಲಾಗಿದೆ.

— Ningappa

ಸರಿಯಾದ ಸಮಯಕ್ಕೆ ಸರ್ಕಾರಿ ಬಸ್ ಬಾರದೆ ವಿದ್ಯಾರ್ಥಿಗಳು, ಪ್ರಯಾಣಿಕರು ಪರದಾಟ - ಹಟ್ಟಿ ಹೊಸ ಬಸ್ ನಿಲ್ದಾಣದಲ್ಲಿ ದಿಢೀರನೆ ಪ್ರತಿಭಟನೆ - ಲಿಖಿತ ಭರವಸೆ ನಂತರ ಹೋರಾಟ ವಾಪಸ್



ರಾಯಚೂರು: ಲಿಂಗಸೂಗೂರು ತಾಲ್ಲೂಕಿನ ಹಟ್ಟಿ ಪಟ್ಟಣದಿಂದ ಸುತ್ತಲಿನ ಹಳ್ಳಿಗಳಿಗೆ ಸರಿಯಾದ ಸಮಯಕ್ಕೆ ಸರ್ಕಾರಿ ಬಸ್ಸುಗಳು ಬಾರದೆ ವಿದ್ಯಾರ್ಥಿಗಳು ಶಾಲೆ ಕಾಲೇಜುಗಳಿಗೆ ಹೋಗದೆ ಸಾರ್ವಜನಿಕರು ಕೆಲಸ ಕಾರ್ಯಗಳಿಗೆ ಹೋಗದೆ ಬಸ್ ನಿಲ್ದಾಣದಲ್ಲಿ ಪರದಾಡುತ್ತಿರುವುದನ್ನು ಖಂಡಿಸಿ CITU ಸಂಘಟನೆಯ ಮುಖಂಡರು ವಿದ್ಯಾರ್ಥಿಗಳು ಸಾರ್ವಜನಿಕರೊಂದಿಗೆ ಹೊಸ ಬಸ್ ನಿಲ್ದಾಣದಲ್ಲಿ ಸಾಂಕೇತಿಕ ಪ್ರತಿಭಟನೆ ನಡೆಸಿದರು. ಸಂಚಾರಿ ನಿರೀಕ್ಷಕರನ್ನು ಕರೆಸಿ ಇಂದಿನಿಂದ ದಿನ ನಿತ್ಯ ಬಸ್ಸುಗಳು ಸರಿಯಾದ ಸಮಯಕ್ಕೆ ಓಡಾಟ ನಡೆಸಬೇಕು. ವಿದ್ಯಾರ್ಥಿಗಳು, ಸಾರ್ವಜನಿಕ ಪ್ರಯಾಣಿಕರು ದಿನ ನಿತ್ಯ ಬಸ್ಸಿಗಾಗಿ ಕಾಯುವಂತೆ ಆಗಬಾರದು.ವಿದ್ಯಾರ್ಥಿಗಳು ಬೆಳಗ್ಗೆ ಬಸ್ಸಿಗಾಗಿ ತೊಂದರೆ ಆಗದೆ ಇದ್ದರೆ ಸಂಜೆ ಸಮಯದಲ್ಲಿ ಮನೆಗೆ ತೆರಳಲು ಬಸ್ಸಿನ ಸಮಸ್ಯೆಯಾಗುತ್ತದೆ. ಮತ್ತು ಲಿಂಗಸೂಗೂರಿನಿಂದ ಹಟ್ಟಿ ಪಟ್ಟಣಕ್ಕೆ ರಾತ್ರಿ 10 ಗಂಟೆಯಿಂದ 11 ಗಂಟೆಗೆ ಯಾವುದೇ ಬಸ್ಸುಗಳು ಇರುವುದಿಲ್ಲ, ಆ ಸಮಯಕ್ಕೆ ಎರಡು ಬಸ್ಸುಗಳು ಬಿಡಬೇಕು ಸಾರ್ವಜನಿಕರು, ವಿದ್ಯಾರ್ಥಿಗಳಿಗೆ ಆಗುವ ತೊಂದರೆಯನ್ನು ನಿಲ್ಲಿಸಬೇಕು ಎಂದು ಒತ್ತಾಯಿಸಿದರು.

ಇದನ್ನು ಸರಿಪಡಿಸದೆ ಇದ್ದಲ್ಲಿ ಹೋರಾಟ ತೀವ್ರ ಗೋಳಿಸುವುದಾಗಿ ಎಚ್ಚರಿಸಿದರು. ನಂತರ ಲಿಖಿತ ಭರವಸೆ ಕೊಡುವವರೆಗೆ ಹೋರಾಟ ನಿಲ್ಲುವುದಿಲ್ಲ ಎಂದು ತಿಳಿಸಿದಾಗ ಸಂಚಾರಿ ನಿರೀಕ್ಷಕರು ಲಿಖಿತ ಪತ್ರ ಕೊಟ್ಟು ನಂತರ ಹೋರಾಟವನ್ನು ಹಿಂಪಡೆಯಲಾಯಿತು ಎಂದು ಪ್ರತಿಭಟನಾಕಾರರು ತಿಳಿಸಿದರು.

ಇದೇ ಸಂದರ್ಭದಲ್ಲಿ ನಿಂಗಪ್ಪ ಎಂ. ವೀರಾಪುರ - CITU & CWFI ತಾಲ್ಲೂಕು ಅಧ್ಯಕ್ಷರು, ಹಾಜಿಬಾಬು ಕಟ್ಟಿಮನೆ - CITU & CWFI ಕಾರ್ಯದರ್ಶಿ, ಪಂಚಾಲಯ್ಯ ಹಟ್ಟಿ ಹಾಗೂ ಇತರರು ಉಪಸ್ಥಿತರಿದ್ದರು.

— Ningappa

ಶ್ರೀ ಊಟಕನೂರು ಬಸವಲಿಂಗ ತಾತನವರ ರುದ್ರಾಭಿಷೇಕ, ದಾಸೋಹ ಮತ್ತು ಕಳಸಾ ಮೇಳ ಕಾರ್ಯಕ್ರಮ - ನ.13 ರಂದು ಸೂಲಿಮಮರದಿಯಲ್ಲಿ - ಸರ್ವರಿಗೂ ಹಾರ್ದಿಕ ಸುಸ್ವಾಗತ



ಶ್ರೀ ಶ್ರೀ ಶ್ರೀ ಊಟಕನೂರು ಬಸವಲಿಂಗ ತಾತನವರ ರುದ್ರಾಭಿಷೇಕ, ದಾಸೋಹ ಮತ್ತು ಕಳಸಾ ಮೇಳ ಕಾರ್ಯಕ್ರಮ

ರಾಯಚೂರು: ಶ್ರೀ ಶ್ರೀ ಶ್ರೀ ಊಟಕನೂರು ಬಸವಲಿಂಗ ತಾತನವರ ರುದ್ರಾಭಿಷೇಕ, ದಾಸೋಹ ಮತ್ತು ಕಳಸಾ ಮೇಳ ಕಾರ್ಯಕ್ರಮವು ದಿನಾಂಕ 13-11-2026, ಶುಕ್ರವಾರದಂದು ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಸೋಮನಮರಡಿಯಲ್ಲಿ ನಡೆಯಲಿದೆ.

ಈ ಪುಣ್ಯ ಕಾರ್ಯಕ್ರಮಕ್ಕೆ ಸರ್ವರಿಗೂ ಹಾರ್ದಿಕ ಸುಸ್ವಾಗತ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ರುದ್ರಾಭಿಷೇಕ, ದಾಸೋಹ ಮತ್ತು ಕಳಸಾ ಮೇಳ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಆಯೋಜಕರು ಮನವಿ ಮಾಡಿದ್ದಾರೆ.

— Ningappa

LOCAL

ರೈತ ಸಂಘಟನೆಗಳ ಒಕ್ಕೂಟವು ಬೀದರ್ ಜಿಲ್ಲೆಯಲ್ಲಿ ಕಬ್ಬು ಬೆಲೆ ನಿಗದಿಗೆ 15 ನವೆಂಬರ್ ಗಡುವು ನೀಡಿದೆ



ರೈತ ಪರ ಸಂಘಟನೆಗಳ ಒಕ್ಕೂಟವು ಬೀದರ್ ಜಿಲ್ಲೆಯಲ್ಲಿ ಕಬ್ಬು ಬೆಲೆ ನಿಗದಿಗೆ 15 ನವೆಂಬರ್ ಗಡುವು ನೀಡಿದೆ. ಒಕ್ಕೂಟದ ಪದಾಧಿಕಾರಿಗಳು ಗುರುವಾರ ಜಿಲ್ಲಾಧಿಕಾರಿಗೆ ಮನವಿ ಪತ್ರವನ್ನು ಹೆಚ್ಚುವರಿ ಜಿಲ್ಲಾಧಿಕಾರಿ ಸುರೇಖಾ ಅವರಿಗೆ ಸಲ್ಲಿಸಿದರು. ನಿಗದಿತ ಅವಧಿಯ ಒಳಗೆ ಕಬ್ಬು ಬೆಲೆ ನಿಗದಿಪಡಿಸದಿದ್ದರೆ ನ. 16 ರಂದು ಮನ್ನಳ್ಳಿಯಿಂದ ಬರೂರು ಸಮೀಪದ ಭವಾನಿ ಸಕ್ಕರೆ ಕಾರ್ಖಾನೆ ವರೆಗೆ ಪಾದಯಾತ್ರೆ ನಡೆಸಿ, ಕಾರ್ಖಾನೆಗೆ ಮುತ್ತಿಗೆ ಹಾಕಲಾಗುವುದು ಎಂದು ತಿಳಿಸಿದರು. ಟನ್ ಕಬ್ಬಿಗೆ ಕನಿಷ್ಠ ರೂ. 4,000 ಬೆಲೆ ನಿಗದಿ ಮಾಡಬೇಕು. ಈಗಾಗಲೇ ಪ್ರತಿ ಟನ್‌ಗೆ ರೂ. 3,000 ಪಾವತಿಸಿದ ರೈತರ ಖಾತೆಗೆ ಬಾಕಿ ರೂ. 1,000 ಜಮೆ ಮಾಡಬೇಕು. ರಾಜ್ಯ ಸರ್ಕಾರ ಕಬ್ಬಿಗೆ ಪ್ರತಿ ಟನ್‌ಗೆ ರೂ. 1,000 ರಾಜ್ಯ ಸಲಹಾ ಬೆಲೆ ನಿಗದಿಪಡಿಸಿ, ರೈತರಿಗೆ ಪ್ರೋತ್ಸಾಹ ಧನ ಕೊಡಬೇಕು. ಕೇಂದ್ರ ಸರ್ಕಾರ ಪ್ರತಿ ಕೆಜಿ ಸಕ್ಕರೆಗೆ ಕನಿಷ್ಠ ರೂ. 60 ಎಂ.ಎಸ್.ಪಿ. ನಿಗದಿಪಡಿಸಬೇಕು. ವಿದ್ಯುತ್ ಶಾರ್ಟ್ ಸರ್ಕಿಟ್‌ನಿಂದ ಹಾನಿಗೊಳಗಾದ ಕಬ್ಬಿಗೆ ಪ್ರತಿ ಎಕರೆಗೆ ರೂ. 1 ಲಕ್ಷ ಪರಿಹಾರ ನೀಡಬೇಕು. ಜಿಲ್ಲೆಯ ಎಲ್ಲ ಸಕ್ಕರೆ ಕಾರ್ಖಾನೆಗಳು ಪಾರದರ್ಶಕ ತೂಕದ ವ್ಯವಸ್ಥೆ ಜಾರಿಗೊಳಿಸಬೇಕು. ಹೊರ ರಾಜ್ಯಗಳಿಂದ ಕಬ್ಬು ತರುವುದನ್ನು ನಿಯಂತ್ರಿಸಿ, ಜಿಲ್ಲೆಯ ಕಬ್ಬು ಬೆಳೆಗಾರರಿಗೆ ಆದ್ಯತೆ ಕೊಡಬೇಕು.

ಜಿಲ್ಲೆಯ ಸಾವಿರಾರು ರೈತರು ಭವಾನಿ ಸಕ್ಕರೆ ಕಾರ್ಖಾನೆ ಸೇರಿ ಜಿಲ್ಲೆಯ ಕಾರ್ಖಾನೆಗಳಿಗೆ ಕಬ್ಬು ಪೂರೈಸುತ್ತಿದ್ದಾರೆ. ಆದರೆ, ಅವರಿಗೆ ನ್ಯಾಯಯುತ ಬೆಲೆ ಸಿಗದ ಕಾರಣ ಆರ್ಥಿಕ ಸಂಕಷ್ಟದಲ್ಲಿದ್ದಾರೆ. ಕಬ್ಬಿಗೆ ರೂ. 3,000 ಬೆಲೆ ಮಾತ್ರ ನೀಡುತ್ತಿರುವುದು ಅನ್ಯಾಯವಾಗಿದೆ ಎಂದು ಹೇಳಿದರು. 2025-26ನೇ ಹಂಗಾಮಿನಲ್ಲಿ ಭವಾನಿ ಸಕ್ಕರೆ ಕಾರ್ಖಾನೆ ಸರ್ಕಾರದ ಸೂಚನೆಯಂತೆ ಪ್ರತಿ ಟನ್ ಕಬ್ಬಿಗೆ ಕನಿಷ್ಠ 2,950 ಬೆಲೆ ಪಾವತಿಸಬೇಕಿತ್ತು. ಆದರೆ, ರೈತರ ಖಾತೆಗೆ ಪ್ರತಿ ಟನ್‌ಗೆ 2,700 ಮಾತ್ರ ಪಾವತಿಸಿದೆ. ಕೂಡಲೇ ಬಾಕಿ ಉಳಿದ ರೂ. 250 ಪ್ರತಿ ಟನ್‌ನ ರೂ. 250 ರೈತರ ಖಾತೆಗೆ ಜಮೆ ಮಾಡಬೇಕು.

ಕರ್ನಾಟಕ ರಕ್ಷಣಾ ವೇದಿಕೆ(ಪ್ರವೀಣಶೆಟ್ಟಿ ಬಣ) ಯ ಜಿಲ್ಲಾ ರೈತ ಘಟಕದ ಅಧ್ಯಕ್ಷ ವೀರಶೆಟ್ಟಿ ಗೌಸಪುರೆ, ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ಚಂದ್ರಶೇಖರ ಮಡಕಿ, ರೈತ ಸಂಘದ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ದಯಾನಂದ ಸ್ವಾಮಿ, ರೈತ ಮುಖಂಡರಾದ ಪ್ರದೀಪ್ ಸಾವಜಿ, ಇಮ್ಯಾನುವೆಲ್ ಮಂದಕನಳ್ಳಿ, ಅಲ್ಲಾವುದ್ದೀನ್ ನಿರ್ಣಾ ಮತ್ತಿತರರು ಈ ಮನವಿಯಲ್ಲಿ ಭಾಗವಹಿಸಿದ್ದರು.

— Basavaraj pujari

LOCAL

ಚಡಚಣ ದತ್ತಾ ಫ್ಯಾಕ್ಟ್ರಿ ಅಧಿಕಾರಿಗಳು ಹಾಗೂ ರೈತರ ಸಂಭಾಷಣೆ



ಚಡಚಣ ದತ್ತಾ ಫ್ಯಾಕ್ಟ್ರಿ ಅಧಿಕಾರಿಗಳು ಹಾಗೂ ರೈತರ ಸಂಭಾಷಣೆ

ಚಡಚಣ ದತ್ತಾ ಫ್ಯಾಕ್ಟ್ರಿ ಅಧಿಕಾರಿಗಳು ಹಾಗೂ ರೈತರ ಸಂಭಾಷಣೆ

ಚಡಚಣ ದತ್ತಾ ಫ್ಯಾಕ್ಟ್ರಿ ಅಧಿ

ರಾಯಚೂರಿನ ಮುರಾರ್ಜಿ ದೇಸಾಯಿ ಬಾಲಕಿಯರ ವಸತಿ ನಿಲಯದಲ್ಲಿ ಬಿಸಿ ನೀರಿನ ವ್ಯವಸ್ಥೆ ಇಲ್ಲ - ಹಾಸ್ಟೆಲ್ ಮೇಲ್ವಿಚಾರಕರ ಮೇಲೆ ಶಿಸ್ತು ಕ್ರಮಕ್ಕೆ ರೈತ ಸಂಘದ ಆಗ್ರಹ



ರಾಯಚೂರಿನ ಮುರಾರ್ಜಿ ದೇಸಾಯಿ ಬಾಲಕಿಯರ ವಸತಿ ನಿಲಯದಲ್ಲಿ ಬಿಸಿ ನೀರಿನ ವ್ಯವಸ್ಥೆ ಇಲ್ಲ - ಹಾಸ್ಟೆಲ್ ಮೇಲ್ವಿಚಾರಕರ ಮೇಲೆ ಶಿಸ್ತು ಕ್ರಮಕ್ಕೆ ಆಗ್ರಹ

ರಾಯಚೂರು: ಅಲ್ಪಸಂಖ್ಯಾತರ ಮುರಾರ್ಜಿ ದೇಸಾಯಿ ಬಾಲಕಿಯರ ವಸತಿ ನಿಲಯ ಬೋಳನ್ ದೊಡ್ಡಿ ರೋಡ್ ರಾಯಚೂರ್ ಹಾಸ್ಟೆಲ್ ಮೇಲ್ವಿಚಾರಕರ ಮೇಲೆ ಶಿಸ್ತು ಕಾನೂನು ಕ್ರಮ ಕೈಗೊಳ್ಳುವಂತೆ ಕರ್ನಾಟಕ ರಾಜ್ಯ ರೈತ ಸಂಘ ದೇವದುರ್ಗ ತಾಲೂಕು ಅಧ್ಯಕ್ಷ ಹಾಜಿ ಮಸ್ತಾನ್ ಬಿ ಗಣೇಕಲ್ (ನಜೀರ್ ಅಹ್ಮದ್) ಅವರು ಮನವಿ ಮಾಡಿದ್ದಾರೆ.

ತಮ್ಮ ಮಕ್ಕಳನ್ನು ವಸತಿ ನಿಲಯಕ್ಕೆ ಬಿಡಲು ಹೋದಾಗ ಅಲ್ಲಿನ ಅವ್ಯವಸ್ಥೆ ಇನ್ನೂ ಸರಿಪಡಿಸಿಲ್ಲದಿರುವುದು ಕಂಡುಬಂದಿದೆ ಎಂದು ಅವರು ತಿಳಿಸಿದ್ದಾರೆ. ಈಗ ಚಳಿಗಾಲ ಪ್ರಾರಂಭವಾಗಿದ್ದರಿಂದ ಅಲ್ಲಿನ ಮಕ್ಕಳಿಗೆ ಸ್ನಾನಕ್ಕೆ ಬಿಸಿ ನೀರಿನ ವ್ಯವಸ್ಥೆ ಇಲ್ಲದಿರುವುದನ್ನು ಕಂಡು ತುಂಬಾ ಬೇಸರವಾಯಿತು ಎಂದು ಅವರು ಹೇಳಿದ್ದಾರೆ.

ಈ ವಿಷಯವಾಗಿ ಮೇಲ್ವಿಚಾರಕರಿಗೆ ಹಲವು ಸಾರಿ ಹೇಳಿದರೂ ಯಾವುದೇ ಪ್ರತಿಕ್ರಿಯೆ ನೀಡುತ್ತಿಲ್ಲ, ಉಡಾಫೆ ಉತ್ತರ ನೀಡುತ್ತಿದ್ದಾರೆ ಎಂದು ಆರೋಪಿಸಿದ್ದಾರೆ. ಹಾಸ್ಟೆಲ್ ರಿಮೋಡಲಿಂಗ್ ಸಮಯದಲ್ಲಿ ತೆಗೆದುಹಾಕಲಾಗಿದ್ದ ಬಿಸಿನೀರಿನ ಬಾಯ್ಲರ್ ಸರಿಪಡಿಸಿಲ್ಲ ಎಂದು ಅವರು ದೂರಿದ್ದಾರೆ.

ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಹಾಸ್ಟೆಲ್ ಮೇಲ್ವಿಚಾರಕರ ಮೇಲೆ ಶಿಸ್ತು ಕಾನೂನು ಕ್ರಮ ಕೈಗೊಳ್ಳಬೇಕು ಹಾಗೂ ಮಕ್ಕಳಿಗೆ ಕೂಡಲೇ ಬಿಸಿ ನೀರಿನ ವ್ಯವಸ್ಥೆ ಕಲ್ಪಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ.

— Ningappa

SPORTS

IPL 2027 ರಿಟೆನ್ಷನ್ ಗಡುವು ನವೆಂಬರ್ 15, ಪಂಜಾಬ್ ಕಿಂಗ್ಸ್ ಹಾರ್ದಿಕ್ ಪಾಂಡ್ಯನನ್ನು ಅರ್ಷದೀಪ್ ಸಿಂಗ್ ಬದಲಿಗೆ ಟ್ರೇಡ್ ಮಾಡಿದೆ



IPL 2027 ರಿಟೆನ್ಷನ್ ಗಡುವು ನವೆಂಬರ್ 15 ಆಗಿದ್ದು, ಫ್ರಾಂಚೈಸಿಗಳು ಅಂತಿಮ ಕಸರತ್ತು ನಡೆಸುತ್ತಿವೆ.

ಪಂಜಾಬ್ ಕಿಂಗ್ಸ್ ತಂಡವು ಅರ್ಷದೀಪ್ ಸಿಂಗ್ ಬದಲಿಗೆ ಹಾರ್ದಿಕ್ ಪಾಂಡ್ಯ ಅವರನ್ನು ಟ್ರೇಡ್ ಮಾಡಿದೆ, ಇದರಿಂದ ತಂಡದ ಲೈನಪ್‌ನಲ್ಲಿ ಪ್ರಮುಖ ಬದಲಾವಣೆ ಸಂಭವಿಸಿದೆ.

ಸಹ-ಮಾಲೀಕ ನೆಸ್ ವಾಡಿಯಾ ಈ ಟ್ರೇಡ್ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿ, ತಂಡದ ಭವಿಷ್ಯಕ್ಕೆ ಇದು ಒಳ್ಳೆಯ ಹೆಜ್ಜೆ ಎಂದು ಹೇಳಿದರು.

— Ganesh S

ಹೋಂಬಾಳೆ ಫಿಲ್ಮ್ಸ್, ಇಸ್ಕಾನ್ ಸಂಸ್ಥಾಪಕರ ಜೀವನಾಧಾರಿತ ಅನಿಮೇಟೆಡ್ ಚಿತ್ರಕ್ಕಾಗಿ ಟ್ರಾನ್ಸ್‌ಸೆಂಡೆಂಟಲ್ ಫಿಲ್ಮ್ಸ್ ಜೊತೆ ಕೈಜೋಡಿಸಿದೆ



ಹೋಂಬಾಳೆ ಫಿಲ್ಮ್ಸ್, ಪ್ರಸಿದ್ಧ ನಿರ್ಮಾಣ ಸಂಸ್ಥೆ, ಇಸ್ಕಾನ್ (ISKCON) ಸಂಸ್ಥಾಪಕರ ಜೀವನಾಧಾರಿತ ಅನಿಮೇಟೆಡ್ ಚಿತ್ರಕ್ಕಾಗಿ ಟ್ರಾನ್ಸ್‌ಸೆಂಡೆಂಟಲ್ ಫಿಲ್ಮ್ಸ್ ಜೊತೆ ಹೊಸ ಸಹಕಾರವನ್ನು ಘೋಷಿಸಿದೆ. ಈ ಸಹಕಾರವು ಎರಡೂ ಕಂಪನಿಗಳ ಸಂಯುಕ್ತ ಪ್ರಯತ್ನದಿಂದ ವಿಶೇಷ ಪ್ರಾಜೆಕ್ಟ್ ಆಗಿದೆ.

ಚಿತ್ರವು ಇಸ್ಕಾನ್ ಸಂಸ್ಥಾಪಕರ ಜೀವನ, ಅವರ ತತ್ವಶಾಸ್ತ್ರ ಮತ್ತು ಸಾಮಾಜಿಕ ಕೊಡುಗೆಗಳನ್ನು ಅನಿಮೇಷನ್ ರೂಪದಲ್ಲಿ ಪ್ರಸ್ತುತಪಡಿಸುವ ಉದ್ದೇಶವನ್ನು ಹೊಂದಿದೆ. ಕುಟುಂಬ ಮತ್ತು ಯುವ ಪ್ರೇಕ್ಷಕರಿಗೆ ಸುಲಭವಾಗಿ ಅರ್ಥವಾಗುವಂತೆ, ಈ ಚಿತ್ರವು ಶಿಕ್ಷಣಾತ್ಮಕ ಹಾಗೂ ಮನರಂಜನಾತ್ಮಕ ಅಂಶಗಳನ್ನು ಸಮತೋಲನವಾಗಿ ಒಳಗೊಂಡಿರುತ್ತದೆ.

ಹೋಂಬಾಳೆ ಫಿಲ್ಮ್ಸ್ ತನ್ನ ಯಶಸ್ವಿ ಚಿತ್ರಗಳ ಮೂಲಕ ಖ್ಯಾತಿ ಗಳಿಸಿದೆ, ಟ್ರಾನ್ಸ್‌ಸೆಂಡೆಂಟಲ್ ಫಿಲ್ಮ್ಸ್ ಅನಿಮೇಷನ್ ಕ್ಷೇತ್ರದಲ್ಲಿ ಪರಿಣತಿ ಹೊಂದಿದೆ. ಈ ಸಂಯೋಜನೆ ಮೂಲಕ ಉನ್ನತ ಗುಣಮಟ್ಟದ ಉತ್ಪಾದನೆ ಮತ್ತು ವಿಶಾಲ ಪ್ರೇಕ್ಷಕರನ್ನು ತಲುಪುವ ಸಾಧ್ಯತೆ ಹೆಚ್ಚಿದೆ.

ಪ್ರಸ್ತುತ ಚಿತ್ರಕ್ಕೆ ಬಿಡುಗಡೆ ದಿನಾಂಕ, ಕಾಸ್ಟ್ ಮತ್ತು ಇತರ ವಿವರಗಳು ಇನ್ನೂ ಪ್ರಕಟವಾಗಿಲ್ಲ.

— Ganesh S

SPORTS

ಶ್ರೇಯಸ್ ಅಯ್ಯರ್‌ಗೆ ನಾಯಕತ್ವ, ಶುಭಮನ್ ಗಿಲ್, ಕೆ.ಎಲ್. ರಾಹುಲ್ ಟೆಸ್ಟ್ ತಂಡಕ್ಕೆ ಸೇರಿ, ಕೊನೆಯ ಎರಡು ಏಕದಿನ ಪಂದ್ಯಗಳಲ್ಲಿ ಭಾರತ ತಂಡ ಮುನ್ನಡೆ



ಶ್ರೇಯಸ್ ಅಯ್ಯರ್‌ಗೆ ನಾಯಕತ್ವ ನೀಡಲಾಗಿದೆ, ಅವರು ಕೊನೆಯ ಎರಡು ಏಕದಿನ ಪಂದ್ಯಗಳಲ್ಲಿ ಭಾರತ ತಂಡವನ್ನು ಮುನ್ನಡೆಸಲಿದ್ದಾರೆ.

ಟೆಸ್ಟ್ ಸರಣಿಯ ಸಿದ್ಧತೆಗಾಗಿ ನಾಯಕ ಶುಭಮನ್ ಗಿಲ್ ಮತ್ತು ಕೆ.ಎಲ್. ರಾಹುಲ್ ಟೆಸ್ಟ್ ತಂಡವನ್ನು ಸೇರಿಕೊಂಡಿದ್ದಾರೆ.

ಇದು ಭಾರತ ತಂಡದ ಒಟ್ಟು ಪ್ರದರ್ಶನವನ್ನು ಸುಧಾರಿಸುವಲ್ಲಿ ಸಹಾಯಕವಾಗಲಿದೆ.

— Ganesh S

ENTERTAINMENT

ಲಂಬೋದರ 2.0 ನಾಳೆ ತೆರೆಗೆ – ಹ್ಯೂಮನಾಯ್ಡ್ ರೋಬೋಟ್ ಜಿಯಾ ಮುಖ್ಯ ಆಕರ್ಷಣೆ



ನಾಳೆ, ನವೆಂಬರ್ 13, ಸಿಂಪಲ್ ಸುನಿ ನಿರ್ಮಾಣದ 'ಲಂಬೋದರ 2.0' ಕನ್ನಡ ಮತ್ತು ಹಿಂದಿ ಭಾಷೆಗಳಲ್ಲಿ ತೆರೆಗೆ ಬರಲಿದೆ. ಈ ಚಿತ್ರವು ಹಿಂದಿನ ಭಾಗದ ಯಶಸ್ಸಿನ ಮೇಲೆ ನಿರ್ಮಿತವಾಗಿದ್ದು, ಪ್ರೇಕ್ಷಕರ ನಿರೀಕ್ಷೆ ಹೆಚ್ಚಾಗಿದೆ.

ರೋಬೋಟ್ ಜಿಯಾ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಿದೆ. ಜಿಯಾ ಚಿತ್ರದ ಪ್ರಮುಖ ಆಕರ್ಷಣೆಯಾಗಿ ಪ್ರಚಾರದಲ್ಲಿ ವಿಶೇಷ ಗಮನ ಸೆಳೆದಿದೆ.

ಚಿತ್ರದ ಬಿಡುಗಡೆಗೆ ಸಂಬಂಧಿಸಿದಂತೆ, ಪ್ರಾದೇಶಿಕ ಥಿಯೇಟರ್‌ಗಳಲ್ಲಿ ಸಮಕಾಲೀನ ಪ್ರದರ್ಶನಕ್ಕೆ ತಯಾರಿ ನಡೆಯುತ್ತಿದೆ, ಮತ್ತು ಪ್ರೇಕ್ಷಕರು ಈ ಹೊಸ ತಂತ್ರಜ್ಞಾನ ಮತ್ತು ಮನರಂಜನೆಯ ಸಂಯೋಜನೆಯನ್ನು ಅನುಭವಿಸುವ ನಿರೀಕ್ಷೆ ಹೊಂದಿದ್ದಾರೆ.

— Ganesh S

ENTERTAINMENT

ಧನುಷ್ ಅವರ 'ಓಂ' ಚಿತ್ರದ ಉತ್ತರ ಭಾರತ ವಿತರಣೆ ಹಕ್ಕು PEN Marudhar ಸಂಸ್ಥೆಗೆ



ಧನುಷ್ ಅವರ 'ಓಂ' ಚಿತ್ರ ನವೆಂಬರ್ 20 ರಂದು ಪ್ರೀಮಿಯರ್ ಆಗಲಿದೆ. ಉತ್ತರ ಭಾರತದಲ್ಲಿ ವಿತರಣೆ ಹಕ್ಕುಗಳನ್ನು PEN Marudhar ಸಂಸ್ಥೆ ಪಡೆದಿದೆ.

PEN Marudhar ಸಂಸ್ಥೆ ಉತ್ತರ ಭಾರತದ ವಿವಿಧ ನಗರಗಳಲ್ಲಿ ಚಿತ್ರವನ್ನು ಪ್ರದರ್ಶಿಸುವ ಹಕ್ಕುಗಳನ್ನು ಹೊಂದಿದೆ. ಈ ಹಕ್ಕುಗಳ ಮೂಲಕ ಸಂಸ್ಥೆ ಚಿತ್ರದ ವ್ಯಾಪಕ ಪ್ರಚಾರ ಮತ್ತು ವಿತರಣೆಗೆ ಜವಾಬ್ದಾರಿ ವಹಿಸುತ್ತದೆ.

ವಿತರಣೆ ಹಕ್ಕುಗಳ ಮಾರಾಟದಿಂದ ಚಿತ್ರ ನಿರ್ಮಾಪಕರು ಮತ್ತು ಪ್ರೊಡ್ಯೂಸರ್‌ಗಳಿಗೆ ಹೆಚ್ಚುವರಿ ಹಣಕಾಸು ಲಾಭ ದೊರೆಯುತ್ತದೆ, ಇದರಿಂದ 'ಓಂ' ಚಿತ್ರದ ಯಶಸ್ಸಿಗೆ ಸಹಕಾರಿಯಾಗುತ್ತದೆ.

— Ganesh S

SPORTS

ಇಂಗ್ಲೆಂಡ್ ಆಲ್‌ರೌಂಡರ್ ಜೇಕಬ್ ಬೆಥೆಲ್ ಮೊಣಕಾಲಿನ ಗಾಯದಿಂದ ಆಟದಿಂದ ಹೊರಬಿಟ್ಟರು



ಇಂಗ್ಲೆಂಡ್ ಕ್ರಿಕೆಟ್ ತಂಡದ ಆಲ್‌ರೌಂಡರ್ ಜೇಕಬ್ ಬೆಥೆಲ್‌ಗೆ ಮೊಣಕಾಲಿನ ಗಾಯವಾಗಿದೆ.

ಈ ಗಾಯದ ಕಾರಣದಿಂದ ಅವರು ಆಸ್ಟ್ರೇಲಿಯಾ ವಿರುದ್ಧ ನಡೆಯುತ್ತಿರುವ ಸೀಮಿತ ಓವರ್‌ಗಳ ಸರಣಿಯಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ.

ತಂಡವು ಬೆಥೆಲ್‌ನ್ನು ಬದಲಾಯಿಸಲು ಬೇರೆ ಆಟಗಾರರನ್ನು ಆಯ್ಕೆ ಮಾಡಿದೆ; ಗಾಯದ ಸ್ಥಿತಿಯ ಬಗ್ಗೆ ಇನ್ನಷ್ಟು ಮಾಹಿತಿ ಇನ್ನೂ ಲಭ್ಯವಿಲ್ಲ.

— Ganesh S

SPORTS

ಶುಭಮನ್ ಗಿಲ್, ರಿಷಭ್ ಪಂತ್‌ಗಳ ಶ್ರೇಯಾಂಕ ಕುಸಿತ; ಅಫ್ಘಾನಿಸ್ತಾನದ ರಹಮತ್ ಶಾ ಅಗ್ರ 10ರಲ್ಲಿ



ICC ಟೆಸ್ಟ್ ಶ್ರೇಯಾಂಕದ ಇತ್ತೀಚಿನ ನವೀಕರಣದಲ್ಲಿ ಭಾರತದ ಶುಭಮನ್ ಗಿಲ್ ಮತ್ತು ರಿಷಭ್ ಪಂತ್ ಅವರ ಸ್ಥಾನಗಳು ಕುಸಿದಿವೆ. ಗಿಲ್ ಅವರ ಶ್ರೇಯಾಂಕ 5ನೇ ಸ್ಥಾನದಿಂದ 7ನೇ ಸ್ಥಾನಕ್ಕೆ, ಪಂತ್ 8ನೇ ಸ್ಥಾನದಿಂದ 10ನೇ ಸ್ಥಾನಕ್ಕೆ ಇಳಿದಿದ್ದಾರೆ.

ರಹಮತ್ ಶಾ ಅಗ್ರ 10ರಲ್ಲಿ ಪ್ರವೇಶಿಸಿದ್ದಾರೆ, ಇದು ಅವರ ದೇಶದ ಕ್ರಿಕೆಟ್ ಇತಿಹಾಸದಲ್ಲಿ ಮಹತ್ವದ ಸಾಧನೆ.

ಈ ಬದಲಾವಣೆಗಳು ಮುಂದಿನ ಅಂತರರಾಷ್ಟ್ರೀಯ ಪಂದ್ಯಗಳಿಗಾಗಿ ತಂಡಗಳ ತಂತ್ರಜ್ಞಾನ ಮತ್ತು ಆಯ್ಕೆ ಪ್ರಕ್ರಿಯೆಗಳ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ.

— Ganesh S

SPORTS

ನ್ಯೂಜಿಲೆಂಡ್ ಕ್ರಿಕೆಟ್ ಮಂಡಳಿ ಭಾರತ ವಿರುದ್ಧದ ಟೆಸ್ಟ್ ಸರಣಿಗೆ ಬಲಿಷ್ಠ ತಂಡ ಘೋಷಿಸಿತು



ನ್ಯೂಜಿಲೆಂಡ್ ಕ್ರಿಕೆಟ್ ಮಂಡಳಿ ಈ ತಿಂಗಳ ಅಂತ್ಯದಲ್ಲಿ ಭಾರತ ವಿರುದ್ಧದ ತವರಿನ ಟೆಸ್ಟ್ ಸರಣಿಗೆ ತನ್ನ ಬಲಿಷ್ಠ ತಂಡವನ್ನು ಘೋಷಿಸಿದೆ.

ಈ ಘೋಷಣೆಯು ಭಾರತ-ನ್ಯೂಜಿಲೆಂಡ್ ನಡುವಣ ಸ್ಪರ್ಧೆಯ ಉತ್ಸಾಹವನ್ನು ಮತ್ತಷ್ಟು ಹೆಚ್ಚಿಸಿದೆ, ಏಕೆಂದರೆ ಎರಡೂ ತಂಡಗಳು ವಿಶ್ವದ ಪ್ರಮುಖ ಕ್ರಿಕೆಟ್ ರಾಷ್ಟ್ರಗಳಾಗಿ ಪರಿಗಣಿಸಲ್ಪಟ್ಟಿವೆ.

ಸರಣಿ ಭಾರತದಲ್ಲೇ ನಡೆಯಲಿದ್ದು, ನ್ಯೂಜಿಲೆಂಡ್ ತಂಡದ ಆಯ್ಕೆ ನಿರ್ಧಾರಗಳು ಪಂದ್ಯಗಳ ಫಲಿತಾಂಶದ ಮೇಲೆ ಮಹತ್ವದ ಪ್ರಭಾವ ಬೀರುವ ಸಾಧ್ಯತೆ ಇದೆ.

— Ganesh S

SPORTS

ಇರ್ಫಾನ್ ಪಠಾಣ್ ಹಾರ್ದಿಕ್ ಟ್ರೇಡ್ ಕುರಿತು ಮುಂಬೈ ಇಂಡಿಯನ್ಸ್ ನಾಯಕತ್ವದ ಮೇಲೆ ಪ್ರತಿಕ್ರಿಯೆ



ಇರ್ಫಾನ್ ಪಠಾಣ್ ಹಾರ್ದಿಕ್ ಪಾಂಡ್ಯ ಮತ್ತು ಅರ್ಷದೀಪ್ ಸಿಂಗ್ ನಡುವಿನ ಮೆಗಾ ಟ್ರೇಡ್ ಬಗ್ಗೆ ತಮ್ಮ ಅಭಿಪ್ರಾಯವನ್ನು ಹಂಚಿಕೊಂಡಿದ್ದಾರೆ. ಅವರು ಮುಂಬೈ ಇಂಡಿಯನ್ಸ್ ತಂಡದ ನಾಯಕತ್ವ ಮತ್ತು ಸಮತೋಲನದ ಮಹತ್ವವನ್ನು ಒತ್ತಿ ಹೇಳಿದ್ದಾರೆ.

ಪಠಾಣ್ ಅವರು ಹೇಳುವಂತೆ, ಯಾವುದೇ ಟ್ರೇಡ್‌ನ ಯಶಸ್ಸು ತಂಡದ ನಾಯಕತ್ವದ ಮೇಲೆ ಅವಲಂಬಿತವಾಗಿದೆ. ನಾಯಕರು ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಸ್ಪಷ್ಟತೆ ಮತ್ತು ಸಮತೋಲನ ಇರಬೇಕು ಎಂಬುದನ್ನು ಅವರು ಒತ್ತಿ ಹೇಳಿದ್ದಾರೆ.

ಹಾರ್ದಿಕ್ ಪಾಂಡ್ಯ ಮತ್ತು ಅರ್ಷದೀಪ್ ಸಿಂಗ್ ನಡುವಿನ ಈ ಟ್ರೇಡ್, ತಂಡದ ಆಟಗಾರರ ಸಮತೋಲನವನ್ನು ಬದಲಾಯಿಸುವ ಸಾಧ್ಯತೆ ಇದೆ. ಪಠಾಣ್ ಅವರ ಪ್ರಕಾರ, ಹೊಸ ಸೇರ್ಪಡೆಗಳು ತಂಡಕ್ಕೆ ಹೊಸ ಶಕ್ತಿ ನೀಡಬಹುದು.

ಈ ಟ್ರೇಡ್ ಮುಂಬೈ ಇಂಡಿಯನ್ಸ್‌ನ ಭವಿಷ್ಯಕ್ಕೆ ಹೇಗೆ ಪರಿಣಾಮ ಬೀರುತ್ತದೆ ಎಂಬುದನ್ನು ನೋಡಲು ಅಭಿಮಾನಿಗಳು ಮತ್ತು ವಿಶ್ಲೇಷಕರು ಕಾಯುತ್ತಿದ್ದಾರೆ.

— Ganesh S

ಸಂಗೀತ ನಿರ್ದೇಶಕ ಅನಿರುದ್ ರವಿಚಂದರ್ ಮತ್ತು ಸನ್‌ರೈಸರ್ಸ್ ಹೈದರಾಬಾದ್ ಸಹ-ಮಾಲೀಕಿ ಕಾವ್ಯಾ ಮಾರನ್ ಗ್ರೀಸ್‌ನಲ್ಲಿ ವಿವಾಹ



ಸಂಗೀತ ನಿರ್ದೇಶಕ ಅನಿರುದ್ ರವಿಚಂದರ್ ಮತ್ತು ಹೈದರಾಬಾದ್ ಸನ್‌ರೈಸರ್ಸ್ ಸಹ-ಮಾಲೀಕಿ ಕಾವ್ಯಾ ಮಾರನ್ ಅವರು ಗ್ರೀಸ್‌ನಲ್ಲಿ ವಿವಾಹ ಸಮಾರಂಭ ನಡೆಸಿ ದಾಂಪತ್ಯ ಜೀವನಕ್ಕೆ ಕಾಲಿಟ್ಟಿದ್ದಾರೆ.

ವಿವಾಹ ಸಮಾರಂಭವು ಗ್ರೀಸ್‌ನ ಸುಂದರ ದೃಶ್ಯಗಳಲ್ಲಿ ಆಯೋಜಿಸಲಾಯಿತು; ಕುಟುಂಬ ಸದಸ್ಯರು ಮತ್ತು ಸ್ನೇಹಿತರನ್ನು ಒಳಗೊಂಡು, ಸಂಭ್ರಮಭರಿತ ವಾತಾವರಣದಲ್ಲಿ ಜೋಡಿಗೆ ಶುಭಾಶಯಗಳು ನೀಡಲಾಯಿತು.

ಈ ವಿವಾಹವು ಸಂಗೀತ ಮತ್ತು ಕ್ರೀಡಾ ಕ್ಷೇತ್ರಗಳ ಸಂಧಿಯಲ್ಲಿ ಹೊಸ ಸಂಯೋಜನೆಯನ್ನು ಸೂಚಿಸುತ್ತದೆ; ಅನಿರುದ್ಧರ ಸಂಗೀತ ನಿರ್ದೇಶಕ ವೃತ್ತಿ ಮತ್ತು ಕಾವ್ಯಾ ಮಾರನ್‌ರ ಕ್ರೀಡಾ ನಿರ್ವಹಣಾ ಪಾತ್ರಗಳ ಸಂಯೋಜನೆ ಪ್ರೇಕ್ಷಕರಲ್ಲಿ ವಿಶೇಷ ಆಸಕ್ತಿ ಹುಟ್ಟಿಸಿದೆ.

ಜೋಡಿ ಭವಿಷ್ಯದ ಯೋಜನೆಗಳ ಬಗ್ಗೆ ಇನ್ನಷ್ಟು ವಿವರಗಳನ್ನು ಹಂಚಿಕೊಳ್ಳುವ ನಿರೀಕ್ಷೆ ಇದೆ, ಆದರೆ ಪ್ರಸ್ತುತ ಅವರು ತಮ್ಮ ಹೊಸ ಜೀವನವನ್ನು ಆನಂದಿಸುತ್ತಿದ್ದಾರೆ.

— Ganesh S

ENTERTAINMENT

ಆಸ್ಕರ್ ವಿಜೇತ ಸಂಗೀತ ನಿರ್ದೇಶಕ ಎ.ಆರ್. ರೆಹಮಾನ್ 'ಮೈ ಬೇಬಿ' ಚಿತ್ರದ ಮೊದಲ ಹಾಡನ್ನು ಸಂಯೋಜಿಸಿದರು



ಆಸ್ಕರ್ ಪ್ರಶಸ್ತಿ ಪಡೆದ ಸಂಗೀತ ನಿರ್ದೇಶಕ ಎ.ಆರ್. ರೆಹಮಾನ್, ಬಹು ನಿರೀಕ್ಷಿತ ಕನ್ನಡ ಚಿತ್ರ 'ಮೈ ಬೇಬಿ'ಯ ಮೊದಲ ಹಾಡಿನ ಸಂಯೋಜನೆಯನ್ನು ಪೂರ್ಣಗೊಳಿಸಿದ್ದಾರೆ. ಈ ಸಂಗೀತ ಪ್ರಾಜೆಕ್ಟ್ ಚಿತ್ರ ನಿರ್ಮಾಪಕರಿಂದ ವಿಶೇಷ ಮಹತ್ವವನ್ನು ಪಡೆದಿದ್ದು, ಪ್ರೇಕ್ಷಕರಿಂದ ಹೆಚ್ಚಿನ ಆಸಕ್ತಿ ನಿರೀಕ್ಷಿಸಲಾಗುತ್ತಿದೆ.

'ಮೈ ಬೇಬಿ' ಚಿತ್ರದ ಮೊದಲ ಹಾಡು, ರೆಹಮಾನ್ ಅವರ ವಿಶಿಷ್ಟ ಶೈಲಿಯನ್ನು ಪ್ರತಿಬಿಂಬಿಸುವಂತೆ, ಭಾವನಾತ್ಮಕ ಹಾಗೂ ಉತ್ಸಾಹಭರಿತ ಧುನಿಗಳನ್ನು ಒಳಗೊಂಡಿದೆ. ಇದರಿಂದ ಚಿತ್ರ ಪ್ರಚಾರದಲ್ಲಿ ಮಹತ್ವದ ಪಾತ್ರ ವಹಿಸುವ ನಿರೀಕ್ಷೆ ಇದೆ.

ಚಿತ್ರದ ನಿರ್ಮಾಪಕರು ರೆಹಮಾನ್ ಅವರೊಂದಿಗೆ ಸಹಕಾರದಿಂದ ಈ ಹಾಡು ಪ್ರೇಕ್ಷಕರಿಗೆ ಶೀಘ್ರದಲ್ಲೇ ಬಿಡುಗಡೆ ಮಾಡಲಾಗುತ್ತದೆ ಎಂದು ತಿಳಿಸಿದರು. ಈ ಸಂಗೀತ ಸಂಯೋಜನೆ, ಚಿತ್ರದ ಒಟ್ಟು ಯಶಸ್ಸಿಗೆ ಸಹಾಯಕವಾಗುವ ನಿರೀಕ್ಷೆ ಇದೆ.

— Ganesh S